ISSN : 3048-7137

# ಆರಯ್

ಕನ್ನಡ ಇಮ್ಮುಖ ಕುರುಡೋದು (Double Blind)
ಮತ್ತು ದಟ್ಟೋದು (Peer Review)
ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ

ಸಂಪುಟ–೨ ಸಂಚಿಕೆ–೨

ಏಪ್ರಿಲ್-ಜೂನ್ ೨೦೨೫

Kannada Online Double Blind Peer-Review Quarterly Research Journal

Volume-2, Number-2 April-June 2025

ಕಟ್ಟುಗ
ಬಸವರಾಜ ಕೋಡಗುಂಟಿ

ಬಂಡಾರ ಪ್ರಕಾಶನ
ಮಸ್ಕಿ

**ಆರಯ್**

ಕನ್ನಡ ಇಮ್ಮುಖ ಕುರುಡೋದು (Double Blind) ಮತ್ತು ದಟ್ಟೋದು (Peer Review) ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ

ಸಂಪುಟ–೨, ಸಂಚಿಕೆ–೨, ಏಪ್ರಿಲ್–ಜೂನ್ ೨೦೨೫

ISSN : 3048-7137

**ARAY**

Kannada Online Double Blind Peer-Review Quarterly Research Journal

Volume-2, Number-2, April-June 2025

https://aray.in/

ಪುಟ/Pages : 134

ಹಕ್ಕು/@: ಪ್ರಕಾಶಕರು

ಬೆಲೆ/Price : **ರೂ. 50/–**

ಸಂಪಾದಕ

**ಪ್ರೊ. ಬಸವರಾಜ ಕೋಡಗುಂಟಿ**

ಅತಿಥಿ ಸಂಪಾದಕ

**ಪ್ರೊ. ಕೆ. ಶಾರದಾ**

ಸಲಹಾ ಮಂಡಳಿ

**ಪ್ರೊ. ಪುರುಷೋತ್ತಮ ಬಿಳಿಮಲೆ, ಪ್ರೊ. ನಟರಾಜ್ ಬೂದಾಳ್**

**ಪ್ರೊ. ಸತ್ಯನಾಥ್ ಟಿ.ಎಸ್. ಪ್ರೊ. ಶ್ರೀನಿವಾಸ ವಿ. ಪಾಡಿಗಾರ, ಪ್ರೊ. ಶ್ರೀಧರ್ ಎಸ್.ಎನ್.**

ಸಂಪಾದಕ ಮಂಡಳಿ

**ಪ್ರೊ. ಚೈತ್ರಾ ಪುಟ್ಟಸ್ವಾಮಿ, ಪ್ರೊ. ಮನು ವಿ ದೇವದೇವನ್**

**ಪ್ರೊ. ಗಿಲ್ ಬೆನ್–ಹೆರುತ್, ಪ್ರೊ. ತಾರಕೇಶ್ವರ್ ವಿ.ಬಿ., ಪ್ರೊ. ಪರಮಶಿವಮೂರ್ತಿ ಡಿ.ವಿ.**

ಕಾರ್ಯಕಾರಿ ಮಂಡಳಿ

**ಡಾ. ಮಲ್ಲೇಶಪ್ಪ ಸಿದ್ರಾಂಪುರ, ಡಾ. ರಾಮಕೃಷ್ಣ ಜಿ, ಡಾ. ಮಹಾಂತೇಶ ಪಾಟೀಲ್**

**ಡಾ. ಬಸಯ್ಯ ಸ್ವಾಮಿ, ಡಾ. ಮಧು ಬಿರಾದಾರ್, ಶ್ರೀ ರೇಣುಕಾ ಕೊಡಗುಂಟಿ**

ಪ್ರಕಾಶಕರು

**ಪರಶುರಾಮ ಕೋಡಗುಂಟಿ**

ಪ್ರಕಾಶಕ, ಬಂಡಾರ ಪ್ರಕಾಶನ

ಮಸ್ಕಿ–೫೮೪ ೧೨೪, ಜಿ. ರಾಯಚೂರು

ಕರೆ–೯೧ ೯೮೮೬೪ ೦೭೦೧೧

bandaraprakashana@gmail.com

https://bandaraprakashana.com

# ಪ ರಿ ವಿ ಡಿ


| | |
|---|---|
| ಕಾಲದಲ್ಲಿ ಕಲೆಯ ಬಯಲಿನ ತೆಲುಗು ಬಯಲಾಟ<br>**ಸ.ರಘುನಾಥ** | **4-13** |
| ಜನಪದ ರಂಗಭೂಮಿಯಲ್ಲಿ ಪುರಾಣ ಕಥಾನಕಗಳು: ಮರುಚಿಂತನೆ<br>**ಡಿ.ಎಸ್.ಚೌಗಲೆ** | **14-22** |
| ಬಯಲಾಟಗಳಲ್ಲಿ ಮಹಿಳೆಯರು<br>**ಅನಸೂಯ ಕಾಂಬಳೆ** | **23-37** |
| ಗಡಿನಾಡ ಬಯಲಾಟಗಳಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಅನನ್ಯತೆ<br>**ಅರುಣ್ ಕುಮಾರ್ ಎಂ ಬಿ** | **38-48** |
| ಮಧ್ಯ ಕರ್ನಾಟಕ ಭಾಗದ ಬಯಲಾಟದ ಸ್ವರೂಪ ಮತ್ತು ಬಯಲಾಟದ ನೆಲೆಗಳು<br>**ಚಿಕ್ಕಣ್ಣ ಯಣ್ಣೆಕಟ್ಟೆ** | **49-87** |
| ಚಕ್ರಬಿಂಬ ಕೋಟೆ: ಒಂದು ಪಾಠ್ಯಿಕ ವಿಶ್ಲೇಷಣೆ<br>**ಡಾ. ಮುನಿರಾಜ ಎ.** | **88-98** |
| ನನ್ನೂರಿನ ನಾಟಕರಂಗ<br>**ಹುಚ್ಚೇಗೌಡ ಎಚ್.** | **99-113** |
| ಆನೇಕಲ್ ತಾಲ್ಲೂಕಿನ ಕೇಳಿಕೆಗಳು<br>**ಕೆ. ಮುನಿಯಪ್ಪ** | **114-121** |
| ಹೆಣ್ಣನ್ನು ಕಟಕಟೆಯಲ್ಲಿ ನಿಲ್ಲಿಸುವ ಚಿತ್ರಪಟ ರಾಮಾಯಣ<br>**ಶ್ವೇತ ಜೆ.** | **122-130** |

ISSN : 3048-7137

# ಆನೇಕಲ್ ತಾಲ್ಲೂಕಿನ ಕೇಳಿಕೆಗಳು

ಕೆ. ಮುನಿಯಪ್ಪ

**ಸೂಚಕ ಪದಗಳು**

ಕೇಳಿಕೆ, ಬಯಲಾಟ, ಜನಪದ ರಂಗಕಲೆ, ಪ್ರಾದೇಶಿಕತೆ

ಸಾರಲೇಖ:

ಆನೇಕಲ್ ತಾಲ್ಲೂಕಿನ ಜನಪದ ರಂಗಕಲೆಗಳಲ್ಲಿ ಕೇಳಿಕೆಗಳು ಪ್ರಮುಖ ಸ್ಥಾನವನ್ನು ಹೊಂದಿವೆ. ಚೌಡಮ್ಮ, ಮಾರಮ್ಮ, ಗಂಗಮ್ಮ ಮುಂತಾದ ಗ್ರಾಮದೇವತೆಗಳ ಹಬ್ಬ ಮತ್ತು ಜಾತ್ರೆಗಳ ಸಂದರ್ಭದಲ್ಲಿ ನಡೆಯುವ ಕೇಳಿಕೆಗಳು ನೃತ್ಯ, ಹಾಡು, ಅಭಿನಯ ಮತ್ತು ಸಂಭಾಷಣೆಗಳ ಮೂಲಕ ಜನರ ಮನರಂಜನೆ ಹಾಗೂ ಜ್ಞಾನವಿಕಾಸಕ್ಕೆ ದಾರಿ ಮಾಡಿಕೊಡುತ್ತವೆ. ದೇಸಿಂಗರಾಜ, ಸಾಸಲು ಚಿನ್ನಮ್ಮ, ಬಾಲನಾಗಮ್ಮ, ರೇಣುಕಾ ಯಲ್ಲಮ್ಮನ ಕಥೆಗಳು ಈ ಕಲೆಯ ಮುಖ್ಯ ವಿಷಯವಾಗಿವೆ. ಪೌರಾಣಿಕ, ತಂತ್ರವಲ್ಲದ, ಶಿಸ್ತುಬದ್ಧವಲ್ಲದ, ಸಹಜ ಪಾಠಶೀಲತೆ ಒಳಗೊಂಡ ಈ ಕಲೆಯನ್ನು ಮಾದಿಗ ಮತ್ತು ಹೊಲೆ ಸಮುದಾಯದವರು ನಿರ್ವಹಿಸುತ್ತಾರೆ. ಹಿನ್ನಲೆ ವಾದ್ಯಗಳಾಗಿ ಹರ್ಮೋನಿಯಂ, ತಬಲ, ತಾಳ ಮತ್ತು ಮುಖವೀಣೆಗಳು ಬಳಸಲ್ಪಡುತ್ತವೆ. ಪ್ರಸಂಗಗಳನ್ನು ಊರಿನ

ದೇವಾಲಯ ಮುಂಭಾಗ ಅಥವಾ ಬಯಲಲ್ಲಿ ನಡೆಸಲಾಗುತ್ತದೆ. ಆಧುನಿಕತೆಯ ಪರಿಣಾಮದಿಂದ ಕಲೆಯ ಹತ್ತಿರದ ತಮಿಳು ಮತ್ತು ಆಂಧ್ರ ರಾಜ್ಯದಿಂದ ಕಲಾವಿದರು ಸಹ ಭಾಗವಹಿಸುತ್ತಾರೆ. ಆನೇಕಲ್ ತಾಲ್ಲೂಕಿನಲ್ಲಿ ಈ ಕಲೆಯ ಪಾರಂಪರಿಕತೆಯನ್ನು ಉಳಿಸಿಕೊಳ್ಳುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿವೆ.

ಜನಪದ ರಂಗಕಲೆಗಳು ಮೂಲತಃ ಧಾರ್ಮಿಕ ಆಚರಣೆ ಮತ್ತು ಆರಾಧನೆಯ ಮೂಲಕ ಬೆಳೆದುಬಂದಿವೆ. ದೈವೀ ಸಂಬಂಧದ ಕಲೆಗಳೇ ಮುಂದೆ ರಂಗರೂಪವನ್ನು ಪಡೆದಿವೆ. ಕರ್ನಾಟಕದ ಕರಾವಳಿ ಪ್ರದೇಶದಲ್ಲಿರುವ ಜಾಲಾಟ, ಹಗರಣ, ಬಯಲು ಸೀಮೆಯ ವೀರಗಾಸೆ, ಗೊಂದಲಿಗರ ಆಟ, ಕರಪಾಲ ಮೇಳ, ಜೋಗೇರಾಟ, ಮೊದಲಾದ ರಂಗಕಲೆಗಳಲ್ಲಿ ನಾಟಕಾಂಶ ಬೆರೆತ ಆಚರಣ ವಿಧಿಗಳನ್ನು ಕಾಣಬಹುದು. ಈ ಆಚರಣೆಗಳು ದಿನಗಟ್ಟಲೆ ನಡೆಯುವಂತೆ ಹಾಗೂ ಅದರಲ್ಲಿ ಸಮಸ್ತರು ಪಾಲ್ಗೊಳ್ಳುವಂತೆ ಮಾಡುವ ಮೂಲಕ ಅದನ್ನು ಏಕಕಾಲದಲ್ಲಿ ಮನರಂಜನೆ ಮತ್ತು ಆರಾಧನೆಯನ್ನಾಗಿಯು ಪರಿಗಣಿಸಿದ ಮಹತ್ವದ ಘಟ್ಟವೇ ಇಂದಿನ ಬಯಲು ರಂಗ. ಈ ನಿಟ್ಟಿನಲ್ಲಿ ಗ್ರಾಮದೇವತೆಗಳ ಹಬ್ಬಗಳು ಮತ್ತು ಜಾತ್ರೆಗಳು ಕೂಡ ಈ ರಂಗ ಬೆಳವಣಿಗೆಯ ಹಿಂದೆ ಕೆಲಸಮಾಡಿವೆ ಎಂಬುದನ್ನು ಮರೆಯುವಂತಿಲ್ಲ. ಅದರಲ್ಲಿಯೂ ಹಬ್ಬ ಹರಿದಿನದ ಸಮಯದಲ್ಲಿ ಮನರಂಜನೆಯ ಭಾಗವಾಗಿ ಕೇಳಿಕೆಗಳನ್ನು ಆಡುವ ಸಂಪ್ರದಾಯವಿದೆ. ಕೇಳಿಕೆಗಳು ಜನಪದ ನಾಟಕದ ಮಾದರಿಯಲ್ಲಿದೆ.

ಜನಪದ ನಾಟಕಗಳು ಜನರ ಮನಸ್ಸನ್ನು ರಂಜಿಸಿ, ಜ್ಞಾನ ಮತ್ತು ಆತ್ಮವಿಕಾಸಕ್ಕೂ ದಾರಿ ಮಾಡಿಕೊಡುತ್ತವೆ. ನಾಟಕವು ಸಾಹಿತ್ಯ, ಸಂಗೀತ, ನೃತ್ಯ, ಚಿತ್ರ, ಶಿಲ್ಪ ಅಭಿನಯಗಳು ಮೇಳವಿಸಿರುವ ದೃಶ್ಯಕಾವ್ಯವಾಗಿದೆ. ರಂಗಭೂಮಿಯ ಇತಿಹಾಸ ಕಾರರು ವಿಮರ್ಶಕರೂ ಆದ ಆಲಾರ್ಡಿಸ್ ನಿಕಲ್ ಎಂಬಾತ ಒಂದು ದೇಶದಲ್ಲಿ ನಾಟಕ ಸಾಹಿತ್ಯಕ್ಕಿರುವ ಸ್ಥಾನವನ್ನು ಕುರಿತು ವಿಮರ್ಶಿಸುತ್ತಾ ದಿ ಥಿಯರಿ ಆಫ್ ಡ್ರಾಮ ಎಂಬ ಕೃತಿಯಲ್ಲಿ ಹೀಗೆ ಅಭಿಪ್ರಾಯಪಡುತ್ತಾರೆ. 'ಸಾಹಿತ್ಯದ ಪ್ರಕಾರಗಳಲ್ಲಿ ನಾಟಕ, ಅತ್ಯಂತ ವಿಚಿತ್ರವೂ, ಗಹನವೂ ಆದುದು. ನಾಟಕದಲ್ಲಿ ಸಾಮೂಹಿಕ ರಂಜನಾ ಸಾಮರ್ಥ್ಯವಿದೆ; ಒಂದು ನಾಡಿನ ಬಾಹ್ಯ ಜೀವನ ಹಾಗೂ ಅಂತಃಸತ್ವದ ಚಿತ್ರಣವಿದೆ; ಸಮಾಜ ಧರ್ಮದ ವಿವೇಚನೆ ಇದೆ. ಸಮಾಜದಲ್ಲಿನ ವಿಷಮತೆಗಳನ್ನು ನಿವಾರಿಸುವ ಮಾರ್ಗದ ನಿರೂಪಣೆಯಿದೆ. ಹಾಸ್ಯ, ವ್ಯಂಗ್ಯಗಳ ಆಳದಲ್ಲಿ, ಅದು ನೋಟಕನನ್ನು ಮುಳುಗಿಸುವಂತೆ ಕಾವ್ಯನುಭವದ ಶಿಖರಕ್ಕೆ ಹತ್ತಿಸಲು ಶಕ್ತವಾಗಿದೆ. ಆದ್ದರಿಂದ

ಮಾನವನ ಬೌದ್ಧಿಕ ಸೃಷ್ಟಿಯಲ್ಲಿ ನಾಟಕ ಅತ್ಯಂತ ಸ್ವಾರಸ್ಯವಾದುದು' ಎನ್ನುತ್ತಾರೆ. ಇದೇ ಮಾತನ್ನು ಜನಪದ ರಂಗಕಲೆಗಳಲ್ಲಿ ಒಂದಾದ ಕೇಳಿಕೆಗಳಿಗೂ ಅನ್ವಯಿಸಬಹುದು.

ಕೇಳಿಕೆಯು ಕನ್ನಡನಾಡಿನ ಜನಪದ ರಂಗಕಲೆಗಳಲ್ಲಿ ಒಂದಾಗಿದ್ದು, ನೃತ್ಯ, ಅಭಿನಯ ಮತ್ತು ಹಾಡುಗಾರಿಕೆಯ ತುಣುಕುಗಳಿಂದ ಕೂಡಿದೆ. ಚೌಡಮ್ಮ, ಮಾರಮ್ಮ, ಗಂಗಮ್ಮ ಮುಂತಾದ ದೇವತೆಯರ ಹಬ್ಬ ಜಾತ್ರೆಗಳ ಸಂದರ್ಭದಲ್ಲಿ ಈ ಕೇಳಿಕೆ ಹೆಚ್ಚು ನಡೆಯುತ್ತದೆ. ಗ್ರಾಮದೇವತೆಗಳ ಹಬ್ಬಗಳು ಮತ್ತು ಜಾತ್ರೆಗಳು ಈ ಕೇಳಿಕೆಯ ಬೆಳವಣಿಗೆಯ ಹಿಂದೆ ಕೆಲಸ ಮಾಡಿವೆ ಎಂದರೆ ತಪ್ಪಾಗಲಾರದು. ಹಿನ್ನಲೆ ವಾದ್ಯಗಳಾಗಿ ಮದ್ದಲೆ, ತಾಳ, ಮತ್ತು ಮುಖವೀಣೆಗಳಿರುತ್ತವೆ. ಕಲಾವಿದರು ಕಿರೀಟ, ಎದೆಹಾರ, ಭುಜಕೀರ್ತಿಗಳನ್ನು ಧರಿಸುತ್ತಾರೆ. ಪಾತ್ರಗಳಿಗೆ ತಕ್ಕಂತೆ ಕಿರೀಟಗಳನ್ನು ಬೇರೆ ಬೇರೆ ಆಭರಣಗಳನ್ನು ವೈವಿಧ್ಯಪೂರ್ಣವಾಗಿ ಕಂಗೊಳಿಸುವಂತೆ ಉಪಯೋಗಿಸುತ್ತಾರೆ. ಲವಕುಶ, ಕುರುಕ್ಷೇತ್ರ, ವಿರಾಟಪರ್ವ, ಲಂಕಾದಹನ, ಬಾಲನಾಗಮ್ಮ, ಶಶಿರೇಖಾಪಹರಣ, ದೌಪ್ರದಿ ವಸ್ತ್ರಾಪಹರಣ ಮುಂತಾದ ಪ್ರಸಂಗಗಳ ರಸವತ್ತಾದ ಘಟನೆಗಳನ್ನು ಇವರು ಆಯ್ಕೆ ಮಾಡಿಕೊಂಡು ಕೇಳಿಕೆ ನಡೆಸಿ ಕೊಡುತ್ತಾರೆ. ಕರಿಭಂಟನ ಕಾಳಗವನ್ನು ಅಭಿನಯಿಸುವುದುಂಟು. ತಂಡದ ಪ್ರಧಾನ ಹಾಡುಗಾರನೇ ಭಾಗವತನಾಗಿರುತ್ತಾನೆ. ಹಬ್ಬ, ಜಾತ್ರೆ, ಹರಿದಿನ, ಹರಿಸೇವೆಗಳ ಸಂದರ್ಭವಲ್ಲದೆ ಆಹ್ವಾನಿಸಿದರೆ ಮನೆಗೂ ಹೋಗಿ ಅವರ ಬೀದಿ ಇಲ್ಲವೆ ಪಡಸಾಲೆಯಲ್ಲಿ ಅಥವಾ ಆ ಊರಿನ ದೇವಸ್ಥಾನದಲ್ಲಿ ಕೇಳಿಕೆ ನಡೆಸುವುದುಂಟು. ಆದರೆ ಕೇಳಿಕೆಯವರು ವೇಷಗಾರರಂತೆ ಭಿಕ್ಷಾವೃತ್ತಿಯವರಲ್ಲ. ಇದೊಂದು ಜನಾಂಗವೂ ಅಲ್ಲ. ಕೇವಲ ಹವ್ಯಾಸ ಅಷ್ಟೇ.

ಕೋಲಾರ, ಶ್ರೀನಿವಾಸಪುರ, ಬಾಗೇಪಲ್ಲಿ ಹಾಗೂ ದೊಡ್ಡಬಳ್ಳಾಪುರದ ಸುತ್ತಮುತ್ತ ಮಾತ್ರ ಕೇಳಿಕೆ ಹೆಚ್ಚು ಕಂಡುಬರುತ್ತದೆ. ಹಾಗೆಯೇ ಆನೇಕಲ್ ತಾಲ್ಲೂಕಿನ ಹಲವು ಭಾಗಗಳಲ್ಲಿಯೂ ಕೇಳಿಕೆಗಳನ್ನು ಆಡಲಾಗುತ್ತದೆ. ತೆಲುಗಿನ ವೀದಿ ನಾಟಕ ಮತ್ತು ವೀದಿ ಭಾಗವತದ ಲಕ್ಷಣಗಳನ್ನು ಹಾಗೂ ಕೆಲಮಟ್ಟಿಗೆ ಮೂಡಲಪಾಯದ ಲಕ್ಷಣಗಳನ್ನು ಈ ಕೇಳಿಕೆ ಹೊಂದಿದೆ. ಪೌರಾಣಿಕ ನಾಟಕಗಳನ್ನು ಒಂದು ವ್ಯವಸ್ಥಿತವಾಗಿ, ಶಿಸ್ತುಬದ್ಧವಾಗಿ ಶಾಸ್ತ್ರೀಯವಾಗಿ ನಡೆಸುತ್ತಾ ಬಂದರೆ ಕೇಳಿಕೆಗಳು ಸಂಪ್ರದಾಯವಾಗಿಯೂ, ಶಾಸ್ತ್ರೀಯವಾಗಿಯೂ ಇರದೇ ಸಹಜವಾಗಿ ನಡೆಯುತ್ತವೆ. ಹಬ್ಬ, ಜಾತ್ರೆ, ತಿಥಿ ಕಾರ್ಯಗಳಲ್ಲೂ ಈ ಕೇಳಿಕೆಗಳನ್ನು ಮಾಡಿಸುತ್ತಾರೆ. ಇದನ್ನು ನಡೆಸಿಕೊಡುವವರು ಹೆಚ್ಚಾಗಿ ತಮಿಳುನಾಡು, ಆಂಧ್ರ ಕಡೆಯಿಂದ ಬರುತ್ತಾರೆ.

ಗಡಿಭಾಗವಾದ ಆನೇಕಲ್ ತಾಲ್ಲೂಕಿನಲ್ಲಿ ಕೇಳಿಕೆಗಳು ಇಂದಿಗೂ ಜೀವಂತವಾಗಿ ಉಳಿದುಕೊಂಡು ಬಂದಿವೆ. ಆದರೆ ಈ ಭಾಗದಲ್ಲಿನ ಕೇಳಿಕೆ ತೆಲುಗು ಭಾಷೆಯಲ್ಲಿಯೇ ಹೆಚ್ಚಾಗಿ ಕಂಡು ಬರುತ್ತದೆ. ಇದರಲ್ಲಿ ಅಭಿನಯ ಕಡಿಮೆ ಇದ್ದು, ಹಾಡುಗಳು ಮತ್ತು ಸಂಭಾಷಣೆಗಳು ಪ್ರಧಾನವಾಗಿರುತ್ತದೆ. ಉಳ್ಳವರು ತಮ್ಮ ಆರ್ಥಿಕ ಸ್ಥಿತಿ–ಗತಿಗಳಿಗೆ ಅನುಸಾರವಾಗಿ ರಾಮಾಯಣ ಮತ್ತು ಮಹಾಭಾರತದ ಪ್ರಸಂಗಗಳನ್ನು ನಾಟಕಗಳಾಗಿ ಮಾಡಿದರೆ, ಕೆಳವರ್ಗದ ಜನ ಅಥವಾ ಶ್ರಮಿಕ ಜನರು ತಮ್ಮ ಮನರಂಜನೆಗಾಗಿ ಅವರದೇ ಸಮುದಾಯದ ಜನ ಸಮುದಾಯದ ನಡುವೆ ರಾತ್ರಿ ಹೊತ್ತು ಕೇಳಿಕೆಗಳನ್ನು ಆಡುತ್ತಾರೆ. ಸುಗ್ಗಿಯ ಕಾಲ ಮುಗಿದ ಮೇಲೆ ತಿಂಗಳುಗಟ್ಟಲೆ ಅಭ್ಯಾಸ ಮಾಡಿ ಹಬ್ಬದ ದಿನಗಳಲ್ಲಿ ಈ ಕೇಳಿಕೆಗಳನ್ನು ಆಡಲಾಗುತ್ತದೆ. ಹಾರ್ಮೋನಿಯಂ, ತಬಲ, ತಾಳ ಮತ್ತು ಮುಖವೀಣೆ ಮೊದಲಾದ ಜನಪದ ವಾದ್ಯಗಳನ್ನು ಕೇಳಿಕೆಗಳಲ್ಲಿ ಮುಖ್ಯವಾಗಿ ಬಳಸಲಾಗುತ್ತದೆ. ಆನೇಕಲ್ ತಾಲ್ಲೂಕಿನಲ್ಲಿ ಕೇಳಿಕೆಗಳನ್ನು ಮಾದಿಗ ಮತ್ತು ಹೊಲೆಯ ಸಮುದಾಯಗಳಿಗೆ ಸೇರಿದ ಜನರು ಹೆಚ್ಚಾಗಿ ಕೇಳಿಕೆಗಳನ್ನು ಆಡುವುದುಂಟು. ಕೇಳಿಕೆಗಳಲ್ಲಿ ಹಿಮ್ಮೇಳದವರು ಇದ್ದು, ಪಾತ್ರಧಾರಿಗಳು ಹೇಳುವ ಹಾಡುಗಳನ್ನು ಮತ್ತು ಕೆಲವು ಸಂಭಾಷಣೆಗಳನ್ನು ಪ್ರೇಕ್ಷಕರು ದನಿಗೂಡಿಸಿ ಒಟ್ಟಾಗಿ ಪಾತ್ರಧಾರಿ, ಭಾಗವತರು ಸೇರಿ ಹಾಡುತ್ತಾರೆ. ದೇಸಿಂಗರಾಜನ ಕಥೆ, ಸಾಸಲು ಚಿನ್ನಮ್ಮನ ಕಥೆ, ರೇಣುಕಾ ಯಲ್ಲಮ್ಮನ ಕಥೆ, ಬಾಲನಾಗಮ್ಮನ ಕಥೆ ಮತ್ತು ಕಾಂಬೋಜಿರಾಜನ ಕಥೆಗಳನ್ನು ಈ ಪ್ರದೇಶದಲ್ಲಿ ಹೆಚ್ಚಾಗಿ ಆಡಲಾಗುತ್ತದೆ.

ಈ ನಿಟ್ಟಿನಲ್ಲಿ ಗಮನಿಸುವುದಾದರೆ, ಆನೇಕಲ್ ತಾಲ್ಲೂಕಿನ ಮರಸೂರು ಗ್ರಾಮದ ಮಾದಿಗ ಸಮುದಾಯಕ್ಕೆ ಸೇರಿದ ಸಜ್ಜಪ್ಪ (ಶರಬಂಡಿ ಲಕ್ಷ್ಮಯ್ಯ) ಮತ್ತು ಇವರ ಮಗನಾದ ವೆಂಕಟೇಶ್ ಕೂಡ ಕೇಳಿಕೆಯ ಕಲಾವಿದರಾಗಿದ್ದು, ಪರಂಪರೆಯನ್ನು ಮುಂದುವರೆಸುತ್ತಿದ್ದಾರೆ. ಅವರು ಅನಕ್ಷರಸ್ಥರಾಗಿದ್ದರೂ ಕೂಡ ಈ ಕಲಾವಿದರು ಹಲವು ಕಥಾಪ್ರಸಂಗಗಳನ್ನು ತಮ್ಮ ಊರಿನಲ್ಲಿ ಕಲಿಸುತ್ತಿದ್ದಾರೆ. ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೂ ಹೋಗಿ ಕೇಳಿಕೆಗಳನ್ನು ಹೇಳಿಕೊಡುತ್ತಿದ್ದಾರೆ. ಮರಸೂರಿನಲ್ಲಿ ಆಡುವ ಕೇಳಿಕೆಗಳಲ್ಲಿ 'ದೇಸಿಂಗರಾಜನ ಕೇಳಿಕೆ'ಯು ಒಂದು. ದೇಸಿಂಗರಾಜನು ಟಿಪ್ಪುಸುಲ್ತಾನನ ಸಾಮಂತ ರಾಜನಾಗಿದ್ದು ದೆಹಲಿ ಸುಲ್ತಾನರ ವಿರುದ್ಧ ಹೋರಾಡುವ ಐತಿಹಾಸಿಕ ಕಥೆಯಾಗಿದೆ. ದೇಸಿಂಗರಾಜನ ಧೈರ್ಯ, ಪರಾಕ್ರಮ ಮತ್ತು ಸಾಹಸಗಳನ್ನು ಈ ಕೇಳಿಕೆ ಒಳಗೊಂಡಿದೆ. ಈ ಕೇಳಿಕೆಯಲ್ಲಿ ಬರುವ ಮುಖ್ಯ ಪಾತ್ರಗಳು ಹೀಗಿವೆ – ಟಿಪ್ಪುಸುಲ್ತಾನ್, ಫೋವಲ ಫಕೀರಿ, ಸೂರಸಿಂಗರಾಜ, ಧರ್ಮಸಿಂಗರಾಜ, ರಾಮ್ ಬಾಯಿ, ಮಂತ್ರಿಗಳು, ಸೈನಿಕರು.

ISSN : 3048-7137

ದೇಸಿಂಗರಾಜನ ತಂದೆ ಸೂರಸಿಂಗರಾಜು. ಈತ ಟಿಪ್ಪುವಿನ ಬಳಿ ಕುದುರೆ ಸವಾರಿ ಮಾಡುವ ಕಲೆಯನ್ನು ಕರಗತ ಮಾಡಿಕೊಂಡಿರುವ ಸಾಮಂತರಾಜ. ಇವನು ಈ ಕಲೆಯನ್ನು ಇತರರಿಗೂ ತರಬೇತಿ ನೀಡಿ ಕಲಿಸುತ್ತಿದ್ದನು. ಒಮ್ಮೆ ದೆಹಲಿ ಸುಲ್ತಾನರ ಆಳ್ವಿಕೆಯ ಕಾಲದಲ್ಲಿ ಕುದುರೆಯನ್ನು ಏರುವ ಸ್ಪರ್ಧೆಯನ್ನು ಏರ್ಪಾಡಿಸಲಾಗಿರುತ್ತದೆ. ಆ ಕುದುರೆಯನ್ನು ಏರಲಾರದವರನ್ನು ಜೈಲು ಶಿಕ್ಷೆಗೆ ಗುರಿಪಡಿಸಲಾಗುತ್ತದೆ ಎಂಬುದು ಈ ಸ್ಪರ್ಧೆಯ ನಿಯಮ. ಅದರಂತೆ ಸೂರಸಿಂಗರಾಜನು ಆ ಸ್ಪರ್ಧೆಯಲ್ಲಿ ಭಾಗವಹಿಸಿ, ಕುದುರೆಯನ್ನು ಏರಲಾರದೇ ಕೊನೆಗೆ ಜೈಲು ಸೇರುತ್ತಾನೆ. ಆ ಸಮಯಕ್ಕೆ ಸರಿಯಾಗಿ ದೇಸಿಂಗರಾಜನ ಜನನವಾಗುತ್ತದೆ. ದೇಸಿಂಗರಾಜನು ವಿದ್ಯಾಭ್ಯಾಸವನ್ನು ಮುಗಿಸಿದ ಮೇಲೆ ತನ್ನ ತಂದೆಯ ಬಗ್ಗೆ ವಿಚಾರಿಸಿದಾಗ ಅವರ ತಾಯಿ ನಿನ್ನ ಹುಟ್ಟು ಅನೈತಿಕವಾದುದು ಎಂದು ಸುಳ್ಳು ಹೇಳುವ ಪ್ರಯತ್ನ ಮಾಡುತ್ತಾಳೆ. ಆಗ ದೇಸಿಂಗರಾಜನು ಹಠಮಾಡಿ ನಿಜ ಹೇಳಲೇಬೇಕೆಂದಾಗ ನಡೆದ ಘಟನೆಯನ್ನೆಲ್ಲಾ ವಿವರಿಸಿ ಹೇಳುತ್ತಾಳೆ. (ದೆಹಲಿ ಸುಲ್ತಾನರ ಕುದುರೆಯನ್ನು ಏರುಬೇಕು. ಅದನ್ನು ಏರಲಾಗದವರು ಜೈಲುವಾಸದ ಶಿಕ್ಷೆಗೆ ಒಳಗಾಗಬೇಕು).

ಈ ವಿಷಯ ತಿಳಿದ ದೇಸಿಂಗರಾಜ ದೀವೆರಿ (ದೆಹಲಿ) ಕಛೇರಿಗೆ ಹೋಗಿ ನನ್ನ ತಂದೆಯನ್ನು ಬಿಡಿಸಿಕೊಂಡು ಬರಲು ತೀರ್ಮಾನಿಸುತ್ತಾನೆ. ಅದರಂತೆ ದೆಹಲಿಗೆ ಹೋದಾಗ ಸುಲ್ತಾನನು ಒಂದು ಷರತ್ತು ವಿಧಿಸುತ್ತಾನೆ. ಅದೇನೆಂದರೆ "ಏರಲು ಕುದುರೆ ಕೊಡುತ್ತೇನೆ, ಆಳೋದಕ್ಕೆ ರಾಜ್ಯ ಕೊಡುತ್ತೇನೆ. ಕುದುರೆ ಸವಾರಿ ಮಾಡಿದರೆ ನನ್ನ ಮಗಳನ್ನು ಕೊಟ್ಟು ಮದುವೆ ಮಾಡುತ್ತೇನೆ ಎಂದು ಹೇಳುತ್ತಾನೆ". ಅದರಂತೆ ದೇಸಿಂಗರಾಜನು ಷರತ್ತಿನಂತೆ ಗೆದ್ದು ತನ್ನ ತಂದೆಯನ್ನು ಬಿಡುಗಡೆಗೊಳಿಸುತ್ತಾನೆ. ತನ್ನ ತಂದೆಯೊಂದಿಗೆ ರಾಜ್ಯಕ್ಕೆ ಹಿಂತಿರುಗುವಾಗ ಮಾರ್ಗಮಧ್ಯದಲ್ಲಿ ಕಾಡು ಪ್ರದೇಶವನ್ನು ತಲುಪುತ್ತಾನೆ. ಸೂರಸಿಂಗರಾಜನು ತಾನು ಸೋತು, ಜೈಲಿನಿಂದ ಮರಳಿ ರಾಜ್ಯಕ್ಕೆ ಬಂದರೆ ಅದೊಂದು ಅವಮಾನವೆಂದು ತಿಳಿದು ತನ್ನ ಕತ್ತಿಯನ್ನು ನೆಲದ ಮೇಲೆ ಇಟ್ಟು ಅದರ ಮೇಲೆ ಬೀಳುತ್ತಾನೆ. ಹೀಗೆ ಕತ್ತು ಕತ್ತರಿಸಿಕೊಂಡು ಸೂರಸಿಂಗರಾಜ ಪ್ರಾಣವನ್ನು ತ್ಯಜಿಸುತ್ತಾನೆ.

ಫಿರೋಜ್ ಖಾನ್, ಹುಸೇನ್ ಖಾನ್, ಮಮ್ಮದ್ ಖಾನ್ ಇವರು ಅಣ್ಣತಮ್ಮಂದಿರು. ಸುಲ್ತಾನನ ನವಾಬನೊಬ್ಬ ದೇಸಿಂಗರಾಜನ ಚಿಕ್ಕಪ್ಪ ಧರ್ಮಸಿಂಗರಾಜನಿಗೆ ಹೊತ್ತು ಮುಳುಗಿ ಬೆಳಗಾಗುವಷ್ಟರಲ್ಲಿ ಮೂರು ಕಂಡುಗದಷ್ಟು ತೆರಿಗೆ ಹಣವನ್ನು ಕಟ್ಟಬೇಕೆಂದು ಅಪ್ಪಣೆಯಾಗುತ್ತದೆ. ಆಗ ದೇಸಿಂಗರಾಜನು ನಾನು ಉಸಿರು ಇರುವವರೆಗೂ ನಾನು ಈ ನವಾಬನಿಗೆ ಯಾವುದೇ ರೀತಿಯ ತೆರಿಗೆಯನ್ನು

ಕಟ್ಟುವುದಿಲ್ಲವೆಂದು ಶಪಥ ಮಾಡಿ ಆ ನವಾಬನೊಂದಿಗೆ ಹೋರಾಡಿ ಪ್ರಾಣ ಬಿಡುವ ಪ್ರಸಂಗದ ಕಥೆಯೇ ಈ ದೇಸಿಂಗರಾಜನ ಕಥೆಯಾಗಿದೆ.

ದೇಸಿಂಗರಾಜನ ಕಥೆಯಂತೆ 'ಸಾಸಲು ಚಿನ್ನಮ್ಮನ ಕಥೆ'ಯು ಈ ಭಾಗದಲ್ಲಿ ಹೆಚ್ಚು ಪ್ರಸಿದ್ಧವಾದ ಕೇಳಿಕೆಯಾಗಿದೆ. ತಿಥಿ ಕಾರ್ಯದಲ್ಲಿ ಈ ಕಥೆಯನ್ನು ಹೆಚ್ಚಾಗಿ ಆಡುತ್ತಾರೆ. ಮಹಿಳೆಯರು ತುಂಬಾ ಆಸಕ್ತಿಯಿಂದ ರಾತ್ರಿಯೆಲ್ಲ ನಿದ್ದೆಗೆಟ್ಟು ಈ ಕಥೆಯನ್ನು ನೋಡುತ್ತಾರೆ. ಮಹಿಳಾ ಪ್ರಧಾನವಾದ ಕೇಳಿಕೆಗಳು ಈ ಭಾಗದಲ್ಲಿ ಹೆಚ್ಚು ಹೆಚ್ಚು ಆಡುತ್ತಾರೆ. ಸಾಸಲು ಚಿನ್ನಮ್ಮನ ಬಗೆಗೆ ಜನಪದ ಕಥೆ, ಕಾವ್ಯ, ನಾಟಕಗಳು ಇವೆ. ಸಾಸಲು ಸೇರಿದಂತೆ ಪಾವಗಡ, ಆಂಧ್ರದ ಅನಂತಪುರ, ಕೋಲಾರ ಮೊದಲಾದ ಕಡೆಗಳಲ್ಲಿ ಸಾಸಲು ಚಿನ್ನಮ್ಮನ ಕುರಿತ ಜನಪದ ಸಾಹಿತ್ಯ ಹೆಚ್ಚು ಜನಪ್ರಿಯತೆ ಪಡೆದುಕೊಂಡಿರುವುದನ್ನು ನೋಡಬಹುದಾಗಿದೆ. ಸಾಸಲು ಚಿನ್ನಮ್ಮ ಮೂಲತಃ ತುಮಕೂರು ಜಿಲ್ಲೆಯ ಪಾವಗಡ ಬಳಿಯಿರುವ ಒಂದು ಹಳ್ಳಿಗೆ ಸೇರಿದವಳು. ತಂದೆ–ತಾಯಿಗೆ ಒಬ್ಬಳೇ ಮಗಳು. ಈಕೆ ಇಲ್ಲಿಂದ ದೊಡ್ಡಬಳ್ಳಾಪುರ ತಾಲ್ಲೂಕಿನ ಸಾಸಲು ಗ್ರಾಮಕ್ಕೆ ಏಳು ಜನ ಅಣ್ಣತಮ್ಮಂದಿರಿರುವ ಕುಟುಂಬದಲ್ಲಿ ಕೊನೆಯ ತಮ್ಮನನ್ನು ಮದುವೆಯಾಗಿ ಬರುತ್ತಾಳೆ. ಚಿನ್ನಮ್ಮ ತನ್ನ ಗಂಡನ ಮನೆಯವರು ಕೊಡುತ್ತಿದ್ದ ಕಷ್ಟ, ನೋವು, ಸಂಕಟಗಳನ್ನು ಅನುಭವಿಸುತ್ತಿದ್ದರು, ನನ್ನ ಹುಟ್ಟಿದ ಊರಿಗೆ ಮತ್ತು ಹುಟ್ಟಿದ ಮನೆಗೆ ಕೆಟ್ಟ ಹೆಸರು ತರಬಾರದೆಂದು ತನ್ನ ಇಷ್ಟದೈವವನ್ನು ನೆನೆಯುತ್ತಾ ದೈವಭಕ್ತಿಯಿಂದ ಆ ನೋವನ್ನು ಮೀರಿ ನಿಲ್ಲುತ್ತಾಳೆ. ದೈವಭಕ್ತಿಯ ಅನನ್ಯತೆಯಿಂದ ಜನರು ಚಿನ್ನಮ್ಮನಲ್ಲಿ ದೈವಿಕ ಅಂಶಗಳನ್ನು ಕಾಣತೊಡಗುತ್ತಾರೆ. ಈ ಗ್ರಾಮದಲ್ಲಿ ಇಂದಿಗೂ ಚಿನ್ನಮ್ಮನ ಹೆಸರಿನಲ್ಲಿ ದೇವಾಲಯ, ಕೆರೆ ಇದೆ. ಚಿನ್ನಮ್ಮನನ್ನು ಗಂಡನ ಕಡೆಯವರು ಮನೆಯಿಂದ ಹೊರ ಹಾಕಿದಾಗ ಗುಡಿಸಲಿನಲ್ಲಿ ವಾಸವಾಗಿದ್ದ ಸ್ಥಳದ ಅವಶೇಷಗಳಿವೆ. ಆಕೆ ಬಳಸುತ್ತಿದ್ದ ರಾಗಿಕಲ್ಲು, ಒಳಕಲ್ಲುಗಳನ್ನು ಕಾಣಬಹುದಾಗಿದೆ. ಸಾಸಲು ಚಿನ್ನಮ್ಮನ ಹೆಸರಿನಲ್ಲಿ ನಿರ್ಮಾಣವಾಗಿರುವ ಕೆರೆಗಳು, ಬಾವಿಗಳು, ದೇವಾಲಯಗಳು ಆಕೆಯ ಸಮಾಜಮುಖಿ ಕಾರ್ಯಗಳಿಗೆ ಸಾಕ್ಷಿಯಾಗಿವೆ. ಈಕೆಯನ್ನು ದೈವಸ್ವರೂಪವೆಂದು ತಿಳಿಯುವ ಜನರು ಈಗಲೂ ತಮ್ಮ ಮಕ್ಕಳಿಗೆ ಚಿನ್ನಮ್ಮ ಎಂದು ಹೆಸರಿಡುತ್ತಾರೆ.

ಗ್ರಾಮೀಣ ಭಾಗದಲ್ಲಿ ಕೇಳಿಕೆಗಳ ಪ್ರದರ್ಶನಕ್ಕೆ ಮೊದಲು ಸಂದರ್ಭಕ್ಕೆ ತಕ್ಕಂತೆ ಯಾವ ಕಥೆಯನ್ನು ನಾವು ಆಡಬೇಕು ಎಂಬುದನ್ನು ತೀರ್ಮಾನಿಸುತ್ತಾರೆ. ನಂತರದಲ್ಲಿ ಅದಕ್ಕೆ ತಕ್ಕನಾದ ಪಾತ್ರಧಾರಿಗಳನ್ನು ಹುಡುಕಿಕೊಂಡು, ಪ್ರತಿದಿನ ತಮ್ಮ ಹೊಲ ತೋಟದ ಕೆಲಸಗಳು ಮುಗಿದು ಮನೆಗೆ ಬಂದು ಸ್ವಲ್ಪ ವಿರಮಿಸಿ ಊಟ

ISSN : 3048-7137

ಆದಮೇಲೆ ಎಲ್ಲರೂ ಸೇರಿಕೊಂಡು ಹಾರ್ಮೋನಿಯಂ ಮೇಸ್ತ್ರು (ಭಾಗವತರು) ಹೇಳಿಕೊಟ್ಟಂತೆ ಅಭ್ಯಾಸ ಮಾಡಲಾಗುತ್ತದೆ. ಒಂದೆರಡು ತಿಂಗಳುಗಳ ನಂತರ ಗೆಜ್ಜೆಪೂಜೆ (ಕೇಳಿಕೆ ಆಡುವುದಕ್ಕೂ ಮುಂಚೆ ಒಮ್ಮೆ ರಿಹರ್ಸಲ್ ಮಾಡುವುದು)ಯನ್ನು ಮಾಡಲಾಗುತ್ತದೆ. ಸಾಮಾನ್ಯವಾಗಿ ಹಬ್ಬ, ಜಾತ್ರೆಯ ದಿನ ಅಥವಾ ಮಾರನೆಯ ದಿನ ಕೇಳಿಕೆಯನ್ನು ಆಡುತ್ತಾರೆ. ಒಂದು ಚಪ್ಪರ ಹಾಕಿ, ಮಾವಿನ ತೋರಣಗಳಿಂದ ಅಲಂಕರಿಸಿ, ಮಧ್ಯಕ್ಕೆ ಒಂದು ಬಿಳಿ ಪರದೆ ಅಥವಾ ಪಂಚೆಗಳನ್ನು ಕಟ್ಟಿ (ಈಗ ಬಣ್ಣ ಬಣ್ಣದ ಅಲಂಕಾರಿಕ ಪರದೆಗಳು ಬಂದಿವೆ ಅದನ್ನು ಬಾಡಿಗೆಗೆ ತಂದು ಬಳಸುತ್ತಾರೆ.) ತಾವೇ ಸಿದ್ಧ ಪಡಿಸಿಕೊಂಡಿದ್ದ ವೇಷಭೂಷಣಗಳನ್ನು ಆ ಪರದೆಯ ಹಿಂದೆಯೇ (ಚೌಕಿಯಲ್ಲಿ) ಧರಿಸಿಕೊಂಡು ಪಾತ್ರಧಾರಿಗಳು ತಯಾರಾಗುತ್ತಾರೆ. ಪಾತ್ರಗಳಿಗೆ ತಕ್ಕಂತೆ ತಾವೇ ಬಣ್ಣಗಳನ್ನು ಹಚ್ಚಿಕೊಳ್ಳುತ್ತಾರೆ. ಕೇಳಿಕೆಯ ತಂಡದಲ್ಲಿ ಹದಿನೈದರಿಂದ ಇಪ್ಪತ್ತು ಜನರಿರುತ್ತಾರೆ. ಇದೊಂದು ರೀತಿಯಾಗಿ ಬಯಲಾಟದ ಮಾದರಿಯಲ್ಲಿಯೇ ಇರುತ್ತದೆ. ಏಕೆಂದರೆ ಇದನ್ನು ಕೂಡ ಬಯಲಲ್ಲಿ ಆಡುತ್ತಾರೆ. ದೇವಾಲಯದ ಮುಂಭಾಗ, ಊರಿನ ಮಧ್ಯಭಾಗದಲ್ಲಿ ಸಾಮನ್ಯವಾಗಿ ಕೇಳಿಕೆಗಳನ್ನು ಆಡಲಾಗುತ್ತದೆ. ಕಲೆಗೆ ಜಾತಿಯ ಹಂಗಿಲ್ಲವಾದರೂ ಈ ಭಾಗದಲ್ಲಿ ಕೇಳಿಕೆಗಳನ್ನು ಹೊಲೆಯ-ಮಾದಿಗ ಜಾತಿಗೆ ಸೇರಿದವರು ಮಾತ್ರ ಆಡುತ್ತಾರೆ. ಮೇಲ್ಜಾತಿಯವರ ಹೊಲ, ಗದ್ದೆ, ತೋಟಗಳಲ್ಲಿ ಜೀತ ಮಾಡಿಕೊಂಡಿರುವವರು, ಕೆಲಸ ಮಾಡುತ್ತಿದ್ದ ಶ್ರಮಿಕರೆ ಈ ಕೇಳಿಕೆಗಳನ್ನು ಆಡುತ್ತಿದ್ದವರು. ಇದಕ್ಕೆಲ್ಲ ಖರ್ಚು ಆಗುತ್ತಿದ್ದ ಹಣವೂ ಕೂಡ ಧಣಿಗಳ ಜೀತದ ಹಣವೇ ಆಗಿರುತ್ತಿತ್ತು. ಈ ಕೇಳಿಕೆಗಳಲ್ಲಿ ಹಾಸ್ಯ, ನೃತ್ಯ, ವೀರಗತೆ, ದುಃಖದ ಕಥೆಗಳನ್ನು ಆಡುತ್ತಿದ್ದರು. ತಿಥಿಗಳ ಸಂದರ್ಭಗಳಲ್ಲಿ ಬಾಲನಾಗಮ್ಮ, ರೇಣುಕಾ ಯಲ್ಲಮ್ಮ, ಸಾಸುಲು ಚೆನ್ನಮ್ಮ ಮೊದಲಾದ ಮಹಿಳಾ ಪ್ರಧಾನವಾದ ಕಥನಗಳನ್ನೇ ಆಡುತ್ತಿದ್ದರು. ಬೊಪ್ಪನ್ ಎಂಬುದು ಹಾಸ್ಯಭರಿತ ಪಾತ್ರವಾಗಿದ್ದು, ದುಃಖದಲ್ಲಿರುವವರನ್ನು ತನ್ನ ಹಾಸ್ಯ, ತರಲೆ ಮಾತುಗಳಿಂದ ಜನರಿಗೆ ಮನರಂಜನೆಯನ್ನು ನೀಡುತ್ತಿದ್ದನು. ಪಾತ್ರಧಾರಿಗಳು ತನ್ನ ಪಾತ್ರದ ವೇಷಭೂಷಣವನ್ನು ಧರಿಸಿ ಬರುವಷ್ಟರಲ್ಲಿ ಪ್ರೇಕ್ಷಕರನ್ನು ತನ್ನ ಮಾತುಗಳಿಂದ ರಂಜನೆ ನೀಡುವುದೇ ಇವನ ಕಾಯಕ. ಇಲ್ಲಿ ಯಕ್ಷಗಾನ ಬಯಲಾಟಗಳಲ್ಲಿರುವಂತೆ ಹೆಣ್ಣಿನ ಪಾತ್ರಗಳನ್ನು ಗಂಡಸರೇ ಮಾಡುತ್ತಾರೆ.

ಆಧುನಿಕತೆಯ ಪ್ರಭಾವದಿಂದಾಗಿ ಈ ಕೇಳಿಕೆಗಳು ಈಗ ನಶಿಸುವ ಹಂತ ತಲುಪಿವೆ. ಆನೇಕಲ್ ತಾಲ್ಲೂಕಿನಲ್ಲಿ ಸ್ಥಳೀಯರು ಯಾರು ಕಲಿಯಲು ಆಸಕ್ತಿ ತೋರದಿರುವುದು ಬೇಸರದ, ನೋವಿನ ಸಂಗತಿಯಾಗಿದೆ. ಆದರೂ ತಾಲ್ಲೂಕಿನ ತೆಲುಗರಹಳ್ಳಿಯ ಪಕ್ಕವಿರುವ ಮ್ಯಾನಗರದ ನಾರಾಯಣ ಎಂಬುವವರು ಈ

ಕೇಳಿಕೆಗಳನ್ನು ಈಗಲೂ ಉಳಿಸಿಕೊಂಡು, ನಡೆಸಿಕೊಂಡು ಬರುತ್ತಿರುವುದು ಸಂತೋಷದ ವಿಷಯವಾಗಿದೆ. ಇವರು ದೇಸಿಂಗರಾಜನ ಕಥೆ, ಬಾಲನಾಗಮ್ಮನ ಕಥೆ, ಕಾಂಬೋಜಿರಾಜನ ಕಥೆ, ರೇಣುಕಾ ಎಲ್ಲಮ್ಮನ ಕಥೆಗಳು ಅಲ್ಲದೇ ರಾಮಾಯಣ, ಮಹಾಭಾರತ, ಭಾಗವತ ಪುರಾಣದ ಕಥೆಗಳನ್ನು ಆಡುತ್ತಾರೆ. ಇದಲ್ಲದೇ ತಮಿಳುನಾಡು ಅಂಧ್ರಪ್ರದೇಶಗಳಿಂದ ಹಬ್ಬ ಜಾತ್ರೆಗಳಿಗೆ ಮತ್ತು ತಿಥಿಕಾರ್ಯಗಳಿಗೆ ಬಂದು ಕೇಳಿಕೆಗಳನ್ನು ನಡೆಸಿಕೊಟ್ಟು ಹೋಗುವುದುಂಟು. ಮೊದಲೆಲ್ಲ 2 ರಿಂದ 3 ಸಾವಿರಗಳಿಗೆ ಆಡುತ್ತಿದ್ದ ಕೇಳಿಕೆ ಕಲಾವಿದರು ಇತ್ತೀಚಿಗೆ 15 ರಿಂದ 20 ಸಾವಿರ ರೂ.ಗಳವರೆಗೂ ಸಂಭಾವನೆ ಪಡೆದು ಕೇಳಿಕೆಗಳನ್ನು ನಡೆಸಿಕೊಡುತ್ತಿದ್ದಾರೆ.

## ಆಕರ ಗ್ರಂಥಗಳು

1. ಬೋರಲಿಂಗಯ್ಯ ಹಿ.ಚಿ.– ಕರ್ನಾಟಕ ಜನಪದ ಕಲೆಗಳ ಕೋಶ, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 1996.